1	2	3
03.	ಬೆಳಗಾಂ	2879
04.	ಬಳ್ಳಾರಿ	67
05.	ಬೀದರ್	242
06.	ಬಾಗಲಕೋಟೆ	184
07.	ಬಿಜಾಪುರ	81
08.	ಚಾಮರಾಜನಗರ	86
09.	ಚಿತ್ರದುರ್ಗ	412
10.	ಚಿಕ್ಕಮಗಳೂರು	138
11.	ಕೊಡಗು	35
12.	ದಾವಣಗೆರೆ	712
13.	ಧಾರವಾಡ	445
14.	ಹುಬ್ಬಳ್ಳಿ	225
15.	ಗುಲ್ಬರ್ಗಾ	584
16.	ಗದಗ್	178
17.	ಹಾಸನ	267
18.	ಹಾವೇರಿ	350
19.	ಕೋಲಾರ	312
20.	ಕೊಪ್ಪಳ	261
21.	ಮಂಡ್ಯ	206
22.	ಮೈಸೂರು	497
23.	ಕಾರವಾರ	123
24.	ರಾಯಚೂರು	69
25.	ಶಿವಮೊಗ್ಗ	524
26.	ಮಂಗಳೂರು	81
27.	ತುಮಕೂರು	861
28.	ಉಡುಪಿ	46
29.	ಪಿಂಚಣಿ ಬಡವಾಡೆ ಖಜಾನೆ	1301
	ಒಟ್ಟು	**11411**

761 (886) ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ರಸ್ತೆಗಳ ದುರಸ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಈ ದುರಸ್ತಿಗೆ ಕಾಲಮಿತಿಯನ್ನೇನಾದರೂ ಹಾಕಿಕೊಳ್ಳಲಾಗಿದೆಯೇ ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಹೌದು.

ಆ) ಸರ್ಕಾರದ ನೂತನ ಕೈಗಾರಿಕಾ ನೀತಿ 2006–2011ರನ್ವಯ ಅಂತರಸನಹಳ್ಳಿ ಮೊದಲನೇ ಮತ್ತು ಎರಡನೇ ಹಂತಗಳಲ್ಲಿ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪ್ರಕ್ರಿಯೆಯು ಪ್ರಾರಂಭಗೊಂಡಿದ್ದು, ಅದರ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಕೈಗಾರಿಕಾ ಪ್ರದೇಶದ ಹೆಸರು	ಕೈಗೊಂಡ ಕ್ರಮ
1.	ಅಂತರಸನಹಳ್ಳಿ ಮೊದಲನೇ ಹಂತ	ಈ ಕೈಗಾರಿಕಾ ಪ್ರದೇಶದಲ್ಲಿ ರೂ. 134.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಸಂಬಂಧ ಟೆಂಡರ್‌ಗಳನ್ನು ಕರೆಯಲಾಗಿದ್ದು, ಈ ಟೆಂಡರ್‌ಗಳ ಅನುಮೋದನೆಯು ಅಂತಿಮ ಹಂತದಲ್ಲಿರುತ್ತದೆ. ಈ ಕಾಮಗಾರಿಯು 2007ರ ಮೇ ತಿಂಗಳ ಒಳಗೆ ಮುಗಿಯುವ ನಿರೀಕ್ಷೆಯಿದೆ.
2.	ಅಂತರಸನಹಳ್ಳಿ 2ನೇ ಹಂತ	ಈ ಕೈಗಾರಿಕಾ ಪ್ರದೇಶದಲ್ಲಿ ರೂ.265.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಸಂಬಂಧ ಟೆಂಡರ್‌ಗಳನ್ನು ಕರೆಯಲಾಗಿದೆ. ಈ ಕಾಮಗಾರಿಯು 2007ರ ಮೇ ತಿಂಗಳ ಒಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

763 (1150) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು): ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಷ್ಣಸ್ಥಾವರಗಳು ಉಗುಳುವ ಹೊಗೆ ಮಿಶ್ರಿತ ಧೂಳಿನಿಂದ ಪರಿಸರದ ಮೇಲೆ ಆಮ್ಲ ಮಳೆಯಿಂದಾಗುವ ದುಷ್ಪರಿಣಾಮಗಳಿರುವ ಪರಿಹಾರ ಮಾರ್ಗ ಯಾವುದು ;